ಉದ್ಭವಿಸಬೇಕಾದರೆ ತೊಂದರೆಯಿರುವುದರಿಂದ ತಾನೆ ? ಅಧಿಕಾರಿಗಳು ವಿರೋಧಪಕ್ಷದಿಂದ ಬಂದರೆ ಮಾತ್ರ ಅವರಿಗೆ ಸರಿಯಾಗಿ ಉತ್ತರ ಕೊಡುತ್ತಾರೆಯೇ ಹೊರತು ಆಡಳಿತ ಪಕ್ಷದಿಂದ ಪ್ರಶ್ನೆ ಬಂದರೆ ನಿರ್ಲಕ್ಷ್ಯ ಮಾಡುತ್ತಾರೆ. ನಾವು ಸೌಮ್ಯವಾಗಿ ಕೇಳುತ್ತೇವೆ, ವಿರೋಧಪಕ್ಷದವರ ತರಹ ಗಲಾಟೆ ಮಾಡುವುದಿಲ್ಲ ಎಂದು ನಿರ್ಲಕ್ಷ್ಯ ಮಾಡುತ್ತಾರೆ. ಐದು ತಿಂಗಳಾದರೂ ರೇಷನ್ ಇಲ್ಲದೆ ವಿದ್ಯಾರ್ಥಿಗಳು ಉಪವಾಸದಿಂದಿದ್ದಾರೆ. ಅಧಿಕಾರಿಗಳು ದುಡ್ಡು ರಿಲೀಸ್ ಮಾಡಿಲ್ಲ. ಉತ್ತರದಲ್ಲಿ ಎಲ್ಲಾ ಸರಿಯಾಗಿದೆ ಎಂದು ಕೊಡುತ್ತಾರೆ. ಕುಡಿಯುವುದಕ್ಕೆ ನೀರಿಲ್ಲ. ಸ್ನಾನಕ್ಕೆ ಸ್ಥಳ ಇಲ್ಲ. ವಿದ್ಯುಚ್ಛಕ್ತಿ ಇಲ್ಲ. ಲೈಟ್ ಬಿಲ್ ಕಟ್ಟುವುದಕ್ಕೂ ಹಣ ಇಲ್ಲದೆ ನಾವು ಹೋಗಿ ಕಾನೂನು ಪ್ರಕಾರ ಅಲ್ಲದಿದ್ದರೂ ಏನೋ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಇಷ್ಟರಮಟ್ಟಿಗೆ ಅಧಿಕಾರಿಗಳು ನಡೆದುಕೊಂಡರೆ ಬಹಳ ಕಷ್ಟವಾಗುತ್ತದೆ. ಮಕ್ಕಳಿಗೆ ಸೌಕರ್ಯ ಕೊಡುವುದಕ್ಕಾಗದಿದ್ದರೆ ಅಥವಾ ಹಾಸ್ಟೆಲ್ ಕ್ಲೋಸ್ ಮಾಡಲಿ. ೭ಳ ಜನ ಹೆಣ್ಣುಮಕ್ಕಳಿದ್ದಾರೆ. ೧೦-೨೦ ಅಡಿ ಜಾಗದಲ್ಲಿ ೭ಳ ಜನ ಮಕ್ಕಳು ಮಲಗಿಕೊಳ್ಳಬೇಕು. ಕಟ್ಟಡವನ್ನು ನಿಧಾನವಾಗಿ ಮಾಡಲಿ. ಆದರೆ ಕನಿಷ್ಟ ಸೌಲಭ್ಯವನ್ನಾದರೂ ಅವರಿಗೆ ಕೊಡದೇಹೋದರೆ ಬಹಳ ಕಷ್ಟವಾಗುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಇವತ್ತೇ ಸೂಕ್ತ ಕ್ರಮ ತೆಗೆದುಕೊಂಡು ತಕ್ಷಣ ಹಣ ಮಂಜೂರು ಮಾಡಬೇಕು. ಅಥವಾ ಹಣ ರಿಲೀಸ್ ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಶಾಸಕರಿಗೆ ಒಂದು ಭರವಸೆಯನ್ನು ಕೊಡುತ್ತೇನೆ. ಈ ಅಧಿವೇಶನ ಮುಗಿದ ಮೇಲೆ ನಾನೇ ಖುದ್ದಾಗಿ ಹೋಗುತ್ತೇನೆ. ಅಧಿಕಾರಿಗಳು ನಿರ್ಲಕ್ಷ್ಯದಿಂದ ಸರಿಯಾಗಿ ಕೆಲಸ ಮಾಡಿದ್ದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.—ರೇಷನ್ ಪರ್ಚೇಸ್ ಮಾಡುವುದಕ್ಕೆ ಹಣ ಬಿಡುಗಡೆ ಮಾಡುವುದಕ್ಕೆ ಆದೇಶ ನೀಡಿ. ಈಗಾಗಲೇ ೯ ಸಾವಿರ ರೂಪಾಯಿಗಳ ಸಾಲ ಮಾಡಿದ್ದಾರೆ. ಆದ್ದರಿಂದ ಸಾಲ ಇದೆ, ರೇಷನ್ ಕೊಡುವುದಿಲ್ಲ ಎಂದು ಸೊಸೈಟಿಯವರು ಹೇಳುತ್ತಾರೆ. ನಾನು ಗ್ಯಾರಂಟಿ ನಿಂತು ರೇಷನ್ ಕೊಡಿಸಿದ್ದೇನೆ. ೭-೮ ದಿವಸದಲ್ಲಿ ಹಣ ಕೊಡಿಸದೇಹೋದರೆ ಅಲ್ಲಿ ಮಕ್ಕಳು ಉಪವಾಸ ಇರಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇವೊತ್ತೇ ಹಣ ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ನಿನ್ನೆ ದಿವಸವೇ ಈ ಬಗ್ಗೆ ಅಧಿಕಾರಿಗಳಿಗೆ ಆದೇಶ ನೀಡಿದ್ದೇನೆ. ತಕ್ಷಣವೇ ಏನಾದರೂ ವ್ಯವಸ್ಥೆ ಮಾಡಿ ಎಂಬುದಾಗಿಯೂ ತಿಳಿಸಿದ್ದೇನೆ. ಅಧಿವೇಶನ ಮುಗಿದಮೇಲೆ ನಾನೇ ಖುದ್ದು ನೋಡಿ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇನೆ.

(iii) ಪದವಿಪೂರ್ವ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳನ್ನು ಪುನರ್ ವಿಮರ್ಶೆ ಮಾಡಿರುವುದು.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಪದವಿಪೂರ್ವ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶಗಳನ್ನು ಪುನರ್ ವಿಮರ್ಶೆ ಮಾಡಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯವು ಬಿ.ಎಸ್.ಸಿ. ಪರೀಕ್ಷಾ ಫಲಿತಾಂಶ ಪ್ರಕಟಿಸುವಲ್ಲಿ ೧೯೮೫ರಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ ನಿರ್ಣಯದಂತೆ ಪೇಪರ್ ಮಿನಿಮಂ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಿತು.

ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ದಿನಾಂಕ ೩೧-೭-೮೬ರಂದು ನಡೆಸಿದ ತನ್ನ ಸಭೆಯಲ್ಲಿ ಸಬ್ಜೆಕ್ಟ್ ಮಿನಿಮಂ ಗಣನೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು. ಆದ್ದರಿಂದ ಹೊಸ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಪದವಿ ಪೂರ್ವ ಶಿಕ್ಷಣದ ಫಲಿತಾಂಶಗಳಿಗೆ ಸಂಬಂಧಿಸಿದಂತೆ, ಫಲಿತಾಂಶಗಳ ಪ್ರಕಟಣೆ ನಂತರ ಪುನರ್ ಮೌಲ್ಯಮಾಪನಕ್ಕೆ ಅವಕಾಶವಿಲ್ಲ. ಅಂಥ ಗೊಂದಲ ಏನೂ ಆಗಿಲ್ಲ. ಬಿ.ಎಸ್ಸಿ, ಪರೀಕ್ಷೆಯಲ್ಲಿ ಮಾತ್ರ ಸ್ವಲ್ಪ ಗೊಂದಲವಾಗಿದೆ. ಅದನ್ನು ಸರಿಪಡಿಸುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ವಿದ್ಯಾ ಇಲಾಖೆ ಮಹಮ್ಮದ್-ಬಿನ್-ತೊಗಲಕ್ ದರ್ಬಾರಿನ ರೀತಿಯಲ್ಲಿ ನಡೆಯುತ್ತಿದೆ. ನಾನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದರೆ, ಅವರು ನನಗೆ ೩೩ಳಿರ ನಿಯಮದ ಮೇರೆಗೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ನೋಡಿದರೆ, ವಿದ್ಯಾ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ? ಯಾವ ಮಟ್ಟಕ್ಕೆ ಇಳಿದಿದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಡಿ. ಮಂಜುನಾಥ್.—ನೀವು ಕೊಟ್ಟಿರುವುದು ಆ ರೀತಿ ಇರಬಹುದು ಎಂದು ಕಾಣುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಫಲಿತಾಂಶದಲ್ಲಿ ಪಾಸಾಗಿರುವವರು ಅಂಕ ಪಟ್ಟಿಯಲ್ಲಿ ಫೇಲಾಗಿರುತ್ತಾರೆ. ಅಂಕ ಪಟ್ಟಿಯಲ್ಲಿ ಫೇಲಾಗಿರುವವರು ಫಲಿತಾಂಶದಲ್ಲಿ ಪಾಸಾಗಿರುತ್ತಾರೆ. ೮ ದಿವಸಗಳಿಗೆ ಒಂದೊಂದು ಫಲಿತಾಂಶ ಬರುತ್ತಿದೆ. ಈ ರೀತಿ ಗೊಂದಲವಾಗಿರುವುದರಿಂದ, ಪಾಸಾಗಿರುವಂತಹ ಅಂಕ ಪಟ್ಟಿಯನ್ನು ತೆಗೆದುಕೊಂಡು ಬೇರೆ ಕಾಲೇಜುಗಳಲ್ಲಿ ಅಡ್ಮಿಷನ್‌ಗೆ ಅರ್ಜಿಯನ್ನು ಹಾಕಿದರೆ ಅದನ್ನು ಆ ಕಾಲೇಜಿನವರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಅಂತಹ ಪರಿಸ್ಥಿತಿ ಬಂದಿದೆ. ಫೇಲಾಗಿದ್ದ ಅನೇಕ ಜನ ಪಾಸಾಗಿದ್ದಾರೆ. ಅದು ಅಪರ ಅಧ್ಯಷ್ಟ. ಮೊದಲು ೧೦ ಪರ್ಸೆಂಟ್ ಫಲಿತಾಂಶ ಬಂದಿದ್ದನ್ನು ೧೯ ಪರ್ಸೆಂಟ್‌ಗೆ ಹೆಚ್ಚಿಸಿದ್ದಾರೆ. ಅನೇಕ ಕಾಲೇಜುಗಳಲ್ಲಿ ಒಬ್ಬನೂ ಪಾಸಾಗಿಲ್ಲ ಅಂತಹ ಒಂದು ಅವ್ಯವಸ್ಥೆಯಾಗಿದೆ. ಅಕೆಡೆಮಿಕ್ ಕೌನ್ಸಿಲ್‌ನಲ್ಲಿರತಕ್ಕ ಸದಸ್ಯರು ಹಾಗೂ ಕಂಟ್ರೋಲರ್ ಆಫ್ ಎಗ್ಸಾಮಿನೇಷನ್ ಅವರಿಗೆ ಮಾನವೀಯತೆ ಇಲ್ಲ. ಅವರು ಒಬ್ಬರು ರಾಕ್ಷಸರು ಎಂದು ಕಾಣುತ್ತದೆ. ಎಲ್ಲಾ ಮಕ್ಕಳನ್ನೂ ಒಂದೇ ಸಾರಿ ಫೇಲ್ ಮಾಡಿದ್ದಾರೆ ಅಂತಹ ಒಂದು ಅವ್ಯವಸ್ಥೆಯಾಗಿದೆ. ಕಂಟ್ರೋಲರ್ ಆಫ್ ಎಗ್ಸಾಮಿನೇಷನ್, ವೈಸ್ ಚಾನ್ಸಲರ್ ಹಾಗೂ ಅಕೆಡೆಮಿಕ್ ಕೌನ್ಸಿಲ್‌ನ ಸದಸ್ಯರ ಮಕ್ಕಳು ಯಾರು ಪಾಸಾಗಿದ್ದಾರೋ ಗೊತ್ತಿಲ್ಲ. ಮಾಸ್ ಕಾಪಿಂಗ್ ಎಂದು ೯–೧೫ಕ್ಕೆ ಪರೀಕ್ಷೆ ಪ್ರಾರಂಭವಾದರೆ, ೯–೨೦ಕ್ಕೆ ಹೋಗಿ ಮಾಸ್ ಕಾಪಿಂಗ್ ಎಂದು ಬರೆದಿದ್ದರಿಂದ ಫಲಿತಾಂಶವನ್ನು ಅನೌನ್ಸ್ ಮಾಡಿಯೇ ಇಲ್ಲ. ಕರ್ನಾಟಕದಲ್ಲಿ ಅನೇಕ ಕಡೆ ಈ ರೀತಿಯಾಗಿದೆ. ಇಂತಹ ಅವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಸರಿಮಾಡಬೇಕು. ಈ ರೀತಿಯ ಅವ್ಯವಸ್ಥೆಗೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ವೈಸ್ ಚಾನ್ಸಲರ್ಸ್ ಯಾರಿದ್ದಾರೆ, ಕಂಟ್ರೋಲರ್ ಆಫ್ ಎಗ್ಸಾಮಿನೇಷನ್ ಯಾರಿದ್ದಾರೆ, ಅವರನ್ನು ಮನೆಗೆ ಕಳುಹಿಸಬೇಕು. ಮತ್ತೆ ಮಾಸ್ ಕಾಪಿಯಿಂಗ್ ಎಂದು ಫಲಿತಾಂಶವನ್ನೇ ವಿತ್‌ಹೋಲ್ಡ್ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದರ ಬಗ್ಗೆ ವಿವರಣೆಯನ್ನು ಕೇಳುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್.—ಮಾಸ್ ಕಾಪಿಯಿಂಗ್ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವರ್ಷ ಆ ರೀತಿಯ ಮಾಸ್ ಕಾಪಿಯಿಂಗ್ ನಡೆದಿಲ್ಲ. ಬಿ ಎಸ್ಸಿಯಲ್ಲಿ ಫಲಿತಾಂಶ ಇಷ್ಟು ಕಡಿಮೆ ಬರುವುದಕ್ಕೆ ಕಾರಣವೇನೆಂದರೆ, ೧೯೬೩ರಲ್ಲಿ ಅಕೆಡೆಮಿಕ್ ಕೌನ್ಸಿಲ್ ರವರು ಒಂದು ತೀರ್ಮಾನವನ್ನು ತೆಗೆದುಕೊಂಡರು. ಥಿಯರಿ ಮತ್ತು ಪ್ರಾಕ್ಟಿಕಲ್ ಎಂದು ಎರಡು ಭಾಗವನ್ನಾಗಿ ಮಾಡಿದ್ದಾರೆ. ಅದರಲ್ಲಿ ಪ್ರಾಕ್ಟಿಕಲ್‌ಗೆ ೩೦ ಅಂಕಗಳನ್ನು ಹಾಗೂ ಥಿಯರಿಗೆ ೭೦ ಅಂಕಗಳನ್ನು ಇಟ್ಟಿದ್ದಾರೆ. ಇದರಿಂದ ಪ್ರಾಕ್ಟಿಕಲ್‌ನಲ್ಲಿ ಒಬ್ಬ ಹುಡುಗನಿಗೆ ೨೯ ಅಂಕಗಳು ಬಂದರೆ, ಥಿಯರಿಯಲ್ಲಿ ಕೇವಲ ೬ ಅಂಕಗಳು ಬಂದರೂ ಕೂಡ ಅಂತಹ ಹುಡುಗ ಪಾಸಾಗುತ್ತಾನೆ. ಇದರಿಂದಾಗಿ ಒಹಳ ಕಡಿಮೆ ಫಲಿತಾಂಶ ಬಂತು. ಅದನ್ನು ಮಾಡಿದ್ದರಿಂದ ೧೬ ಪರ್ಸೆಂಟ್ ಫಲಿತಾಂಶ ಬಂದಿದೆ. ಇದನ್ನು ಮತ್ತೆ ವಿಮರ್ಶೆ ಮಾಡಬೇಕೆಂದು ಅಕಾಡೆಮಿಕ್ ಕೌನ್ಸಿಲ್‌ರವರು ತೀರ್ಮಾನ ಮಾಡಿ ಸಬ್ಜೆಕ್ಟ್ ಮಿನಿಮಂ ಎಂದು ಮಾಡಬೇಕೆಂದು ತೀರ್ಮಾನ ಮಾಡಿದ ಮೇಲೆ ಫಲಿತಾಂಶವನ್ನು ಪುನಃ ರಿವೈಸ್ ಮಾಡಿದ ಮೇಲೆ ಕೆಲವರು ಪಾಸಾಗಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇಂತಹ ಅವಿವೇಕ ಏಕೆ ?

ಶ್ರೀ ಡಿ. ಮಂಜುನಾಥ್.—ಇನ್ನು ಮುಂದೆ ಅಂತಹ ಅವಿವೇಕತನ ಆಗದೇ ಇರುವಂತೆ ನೋಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾಸ್ ಕಾಪಿಯಿಂಗ್ ಇಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಮಾಸ್ ಕಾಪಿಯಿಂಗ್ ಹೆಸರಿನಲ್ಲಿ ಮುಳಬಾಗಿಲು ಎಂ.ಇ.ಎಸ್. ಕಾಲೇಜಿನ ೬೯ ಜನರ ಫಲಿತಾಂಶವನ್ನು ಈ ವರೆವಿಗೂ ಅನೌನ್ಸ್ ಮಾಡಿಲ್ಲ. ಅಲ್ಲಿನ ವಿದ್ಯಾರ್ಥಿಗಳು ಬೇರೆ ಕಡೆ ಹೋಗುವವರು ಇದ್ದಾರೆ. ಅವರ ಪರಿಸ್ಥಿತಿ ಏನು ? ಇದನ್ನು ಕೂಡಲೇ ಇತ್ಯರ್ಥ ಪಡಿಸಬೇಕು.

ಶ್ರೀ ಡಿ. ಮಂಜುನಾಥ್.—ಕರ್ನಾಟಕದಲ್ಲಿ ಮಾಸ್ ಕಾಪಿಂಗ್ ಕೆಲವು ಕಡೆ ಆಗಿದೆ. ಇದನ್ನು ಪತ್ತೆ ಮಾಡುವುದಕ್ಕೋಸ್ಕರವೇ ಒಂದು ಸ್ಕ್ವಾಡ್ ಎಂದು ಮಾಡಿದ್ದೇವೆ. ಅವರು ಕೆಲವು ಕಡೆ ಹೋಗಿ ಹಿಡಿದಿದ್ದಾರೆ. ಇದರ ಬಗ್ಗೆ ಎವಿಡೆನ್ಸ್ ಹಾಗೂ ವಿಚಾರಣೆ ನಡೆಯಬೇಕಾಗಿರುವುದರಿಂದ ಫಲಿತಾಂಶ ಹೊರಡುವುದು ಸ್ವಲ್ಪ ತಡವಾಗಿದೆ. ಅದನ್ನು ಆದಷ್ಟು ಬೇಗ ಇತ್ಯರ್ಥಪಡಿಸುವಂತೆ ಪ್ರಯತ್ನ ಮಾಡುತ್ತೇನೆ.